ಒದ್ದೆಯಾದವು. ಅರೇ, ಅಳ್ತ ಇದೀರ, ಏನಾಯ್ತು ಅನ್ನುತ್ತ ಕಾಟಿನ ಮೇಲೆ ಕೂತು ಅವನ ತಲೆಯನ್ನು ಎರಡೂ ಕೈಗಳಿಂದ ಸೆಳೆದುಕೊಂಡಳು. ಅರವಿಂದ ಏನನ್ನೋ ಹೇಳಲಾಗದೆ ಒದ್ದಾಡ್ತಿದ್ದಾನೆ ಅನ್ನಿಸಿತು. ಹತ್ತು ನಿಮಿಷ ಅವನ ಮುಖವನ್ನು ಎದೆಗೆ ಒತ್ತಿಕೊಂಡೇ ಇದ್ದಳು.

'ತನು, ನನ್ನ ಊರಿಗೆ ಕಳಿಸು. ನನ್ನ ಕಾಲುಗಳು ಸರಿ ಹೋಗಲ್ಲ... ನಿಂಗೆ ಹೊರೆಯಾಗಿದ್ದೀನಿ ಅನ್ನಿಸ್ತಾ ಇದೆ. ಊರಲ್ಲಿ ಅಮ್ಮ, ಅಣ್ಣ ಇದಾರೆ. ಅಲ್ಲೇ ಇದ್ದು ಬಿಡ್ತೀನಿ' ಅಂದ.

'ಆಯ್ತು, ಈಗ ಮಲಗಿ, ಬೆಳಿಗ್ಗೆ ಮಾತಾಡಣ. ನಿಮ್ಮನ್ನು ಊರಿಗೆ ಕಳಿಸಿ ನಾನೊಬ್ಬಳೇ ಇರಲ್ಲ. ಎರಡು ವಾರ ರಜಾ ಕೇಳಿದ್ದೀನಿ. ಮ್ಯೂಸಿಕ್ ಫೆಸ್ಟಿವಲ್‌ಗೆ ಪೂನಾಕ್ಕೆ ಹೋಗಬೇಕು ಅಂತ ಸುಳ್ ಹೇಳಿದ್ದೀನಿ. ಇಬ್ಬರೂ ಊರಿಗೆ ಹೋಗೋಣ. ಅಲ್ಲಿ ಎಂಟ್ಹತ್ತು ದಿನ ಇದ್ದು ಆಮೇಲೆ ಊಟಿಗೆ ಹೋಗೋಣ. ವಿಕ್ಕಿ ಸ್ಕೂಲಿಂದ ಪೇರೆಂಟ್ಸ್ ಡೇ ಇನ್ವಿಟೇಷನ್ ಬಂದಿದೆ. ನಾವು ಹೋದ್ರೆ ಅವನಿಗೂ ಖುಷಿಯಾಗುತ್ತೆ... ಅವನನ್ನು ನಮ್ಮ ಜತೆ ಕರಕೊಂಡ್ ಬರಬಹುದು. ಬೆಳಿಗ್ಗೆ ಪ್ಲಾನ್ ಮಾಡಿದರಾಯಿತು. ನಾಳೆ ನಿಮ್ಮ ಲ್ಯಾಬ್ ರಿಪೋರ್ಟ್ ಬರುತ್ತೆ. ಅಂಥಾ ತೊಂದರೆ ಏನೂ ಇರಲ್ಲ ಅಂತ ಡಾಕ್ಟರು ಹೇಳಿದ್ದಾರೆ. ನೀವು ಸುಮ್ಮನೆ ತಲೆ ಕೆಡಿಸಿಕೊಳ್ತ ಇದೀರ. ಪಾಸಿಟಿವ್ ಆಗಿ ಯೋಚನೆ ಮಾಡಿ' ಅನ್ನುತ್ತ ಅವನ ಮುಖ ನೋಡಿದಳು.

'ರಿಪೋರ್ಟ್‌ನಲ್ಲಿ ಏನಾದ್ರೂ ಅಡ್ವರ್ಸ್ ಬಂದರೂ ಅದಕ್ಕೂ ಒಂದು ಪರಿಹಾರ ಇದ್ದೇ ಇರುತ್ತೆ. ಇಲ್ಲಿ ಆಗಲ್ಲ ಅಂತಾದರೆ ಬೇರೆ ಎಲ್ಲಿಗಾದರೂ ಹೋಗಿ ಟ್ರೀಟ್ಮೆಂಟ್ ಮಾಡಿಸಬಹುದು' ಅನ್ನುತ್ತ ಅವನ ಪಕ್ಕದಲ್ಲೇ ಕಾಲು ಚಾಚಿದಳು. ಅವನು ರೂಫ್ ನೋಡುತ್ತಲೇ ಇದ್ದ. ಕಣ್ಣ ತುದಿಯಿಂದ ನೀರು ಹರಿದು ಒಣಗಿರೋದು ಮಂದ ಬೆಳಕಲ್ಲೂ ಕಾಣಿಸಿತು. ಆಮೇಲೆ ಅವಳಿಗೆ ನಿದ್ದೆ ಸುಳಿಯಲಿಲ್ಲ.

ತುಂಬಾ ಹೊತ್ತು ಮಗ್ಗುಲು ಬದಲಿಸುತ್ತಲೇ ಇದ್ದಳು. ಯಾವಾಗ ನಿದ್ದೆಗೆ ಜಾರಿದಳೊ. ಬೆಳಗಿನ ಜಾವ ಅವಳಿಗೊಂದು ಕನಸು. ಅರವಿಂದ ವೀಲ್‌ಚೇರಿನ ಮೇಲೆ ಕೂತಿದ್ದಾನೆ. ತನ್ಮಯಿ ಅದನ್ನು ತಳ್ಳಿಕೊಂಡು ತನ್ನ ಹೊಸ ಕವಿತೆಯ ಸಾಲುಗಳನ್ನು ಹೇಳುತ್ತ ನಡೆಯುತ್ತಿದ್ದಾಳೆ. ದಟ್ಟ ಕಾಡನ್ನು ಸೀಳಿ ಮಾಡಿದ ಸಮತಟ್ಟಾದ ಡಾಂಬರು ರಸ್ತೆ. ಅವನು ಕಣ್ಣುಮುಚ್ಚಿ ಕೇಳಿಸಿಕೊಳ್ಳುತ್ತಿದ್ದಾನೆ. ಎತ್ತ ಹೋಗುತ್ತಿದ್ದೇವೆ ಎಂಬ ಪರಿವೆ ಇಬ್ಬರಿಗೂ ಇಲ್ಲ. ಥಟ್ಟನೆ ರಸ್ತೆ ಜಾರುಬಂಡೆಯಂತೆ ಇಳಿಮುಖವಾಗುತ್ತಿದೆ. ಅವನು ಚೇರಿನಿಂದ ಜಾರಿ ಮುಗ್ಗರಿಸಬಹುದು ಅಂತ ತನ್ಮಯಿಗೆ ಭಯವಾಯಿತು... ವೀಲ್‌ಚೇರು ಕೈಯಿಂದ ಜಾರುತ್ತಿದೆ. ಅಂಗೈಗಳು ಬೆವರಿನಿಂದ ಒದ್ದೆಯಾಗಿವೆ. ಇನ್ನೇನು ಚೇರು ಕೈಬಿಡುತ್ತೆ ಅನ್ನಿಸಿತು. ಅರೇ ಜಾರೇ ಬಿಟ್ಟಿತು... ಸಹಾಯಕ್ಕೆ ಕೂಗುತ್ತಿದ್ದಾಳೆ, ಧ್ವನಿಯೇ ಹೊರಡುತ್ತಿಲ್ಲ. ಎಚ್ಚರವಾಯಿತು. ಅರವಿಂದ ಪಕ್ಕದಲ್ಲೇ ಮಲಗಿದ್ದಾನೆ ಮಗುವಿನಂತೆ. ವೀಲ್‌ಚೇರು ಮಂಚದ ಇನ್ನೊಂದು ಬದಿಯಲ್ಲಿದೆ. ಸುಧಾರಿಸಿಕೊಳ್ಳಲು ಅವಳಿಗೆ ಕೆಲ ನಿಮಿಷಗಳು ಬೇಕಾದವು.

★★★

ಒಂಬತ್ತರ ಹೊತ್ತಿಗೆ ಅರವಿಂದನ ಕೇರ್‌ಟೇಕರ್ ಬಂದ. ಅವನು ಫಿಸಿಯೊಥೆರಪಿಸ್ಟ್. ಬೆಂಗಳೂರಲ್ಲೇ ಹುಟ್ಟಿ ಬೆಳೆದ ಮಲಯಾಳಿ. ಕನ್ನಡ ಸಲೀಸಾಗಿ ಮಾತಾಡ್ತಾನೆ. ಆದರೆ, ಮಾತು ಕಡಿಮೆ. ಮೌನಕ್ಕಿರುವ ಶಕ್ತಿ ಅವನಿಗೆ ಚೆನ್ನಾಗಿ ಗೊತ್ತಿರುವಂತಿದೆ. ಬಂದ ಕೂಡಲೇ ಅರವಿಂದನ್ನ ಎಬ್ಬಿಸಿ, ಟಾಯ್ಲೆಟ್‌ಗೆ ಕೂರಿಸ್ತಾನೆ. ಆಮೇಲೆ ಸ್ನಾನ ಮಾಡಿಸಿ ತಿಂಡಿ ಕೊಡ್ತಾನೆ ಅನಂತರ ಅರ್ಧ ಗಂಟೆ ಕಾಲುಗಳಿಗೆ ಮಸಾಜು ಮಾಡ್ತಾನೆ. ಸಂಜೆ ಐದು ಗಂಟೆವರೆಗೆ ಅವನ ಜತೆಯೇ ಇರೋ ಈ ಹುಡುಗನ ಬಗ್ಗೆ ತನ್ಮಯಿಗೆ ಸ್ವಂತ ತಮ್ಮ ಅನ್ನಿಸುವಷ್ಟು ಅಕ್ಕರೆ.

ಅವನು ನಿರ್ಭಾವುಕ. ವ್ಯಾವಹಾರಿಕ ಮನಃಸ್ಥಿತಿಯ ಹುಡುಗ. ಯುಪಿಎಸ್‌ಸಿ ಪರೀಕ್ಷೆಗೆ